**Circular No – 058 / 2023**

Date: 28.04.2023

To
All Members of The Association

**CIRCULAR ISSUED BY THE DIRECTOR OF FACTORIES**
**FOR GRANT OF PAID HOLIDAY TO THE EMPLOYEES ON POLLING DAY**

1. Director of Factories, Boilers, Industrial Safety and Health Government of Karnataka has also issued circular no. LGL-2/Misc/CR1/2023-24 dated 28.04.2023. Copy of the said circular is enclosed.
2. The circular of the Director of Factories also clearly state that only those employees who are eligible to vote in the forthcoming election to the Karnataka Legislative Assembly scheduled to be held on 10.05.2023 shall be given paid holiday to enable them to exercise their franchise in the election.
3. The Director of Factories has further observed that if the factory is undertaking continuous process of production and if the absence of the employees is likely to endanger the factory or if there is a possibility of substantial loss being caused to the establishment, such establishment shall device a procedure to eligible employees to exercise their franchise in the forthcoming election. Such employees should be given sufficient time to enable them to proceed to the polling station and exercise their franchise.
4. This circular may be read along with KEA Circulars No. 46/2023 dated 12.04.2023 and 54/2023 dated 26.04.2023 on the above subject.

**For, KARNATAKA EMPLOYERS' ASSOCIATION**

**Sd/**
**[B C Prabhakar]**
**President**

+91 9449183208 Bengaluru, Karnataka kea@kea.co.in

ಕರ್ನಾಟಕ ಸರ್ಕಾರ
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ
ನಿರ್ದೇಶಕರ ಕಛೇರಿ.

080 – 29753051
directorfbish@gmail.com
www.esuraksha.karnataka.gov.in

2ನೇ ಮಹಡಿ. ಕಲ್ಯಾಣ-ಸುರಕ್ಷಾ ಭವನ.
ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29

ಸಂ: ಎಲ್‌ಜಿಎಲ್–2/ಇತರೆ/ಸಿಆರ್-01/2023-24 ದಿ: 28-04-2023

**ಸುತ್ತೋಲೆ**

**ವಿಷಯ** : ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆ – 2023, ಮತದಾನದ ದಿನಾಂಕ 10/05/2023 ರಂದು ಅರ್ಹ ಮತದಾರರಿಗೆ ವೇತನ ಸಹಿತ ರಜೆ ಘೋಷಿಸುವ ಕುರಿತು.

**ಉಲ್ಲೇಖ** : ಭಾರತ ಚುನಾವಣಾ ಆಯೋಗದ ಪತ್ರ ಸಂಖ್ಯೆ 78/EPS/2023 ದಿನಾಂಕ 31–03–2023.

ಓ – ಓ

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, **ಪ್ರಜಾ ಪ್ರಾತಿನಿಧ್ಯ ಕಾಯ್ದೆ 1951ರ ಕಲಂ 135(ಬಿ)** ರಡಿಯಲ್ಲಿ ಎಲ್ಲಾ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಅರ್ಹ ಮತದಾರರಿಗೆ ಮತದಾನದ ದಿನದಂದು ಮತ ಚಲಾಯಿಸಲು ಅನುವಾಗುವಂತೆ ವೇತನ ಸಹಿತ ರಜೆ ನೀಡಲು ಪ್ರಾವಧಾನ ಕಲ್ಪಿಸಲಾಗಿದೆ. ಇದು ಎಲ್ಲಾ ಪಾಳಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ ಅನ್ವಯವಾಗುತ್ತದೆ. ಮುಂದುವರೆದು, ಸದರಿ ದಿನದ ಗೈರುಹಾಜರಿಗೆ ಯಾವುದೇ ವೇತನ ಕಡಿತ ಮಾಡದಂತೆ ಮತ್ತು ಸದರಿ ದಿನದಂದು ಕೆಲಸ ನಿರ್ವಹಿಸಿದ್ದಲ್ಲಿ ನೀಡಲಾಗುತ್ತಿದ್ದ ವೇತನವನ್ನೇ ಸದರಿ ರಜಾ ದಿನಕ್ಕೆ ನೀಡಲು ನಿರ್ದೇಶನವಿರುತ್ತದೆ. ಸದರಿ ರಜೆಯು ಅರ್ಹ ಮತದಾರರಾದ ದಿನಗೂಲಿ, ಗುತ್ತಿಗೆ ಕಾರ್ಮಿಕರು, ಎಲ್ಲಾ ವರ್ಗದ ಕಾರ್ಮಿಕರು ಹಾಗೂ ಅಧಿಕಾರಿಗಳಿಗೂ ಅನ್ವಯವಾಗುತ್ತದೆ.

ಮೇಲಿನ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯದಲ್ಲಿ ಸಾರ್ವತ್ರಿಕ ವಿಧಾನಸಭಾ ಚುನಾವಣೆ ನಡೆಯಲಿರುವ ದಿನಾಂಕ 10.05.2023 ರಂದು ಕಾರ್ಖಾನೆಗಳ ಕಾಯ್ದೆ 1948 ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಅರ್ಹ ಮತದಾರ ಕಾರ್ಮಿಕರಿಗೆ ಕಡ್ಡಾಯವಾಗಿ ವೇತನ ಸಹಿತ ರಜೆಯನ್ನು ನೀಡಲು ಸೂಚಿಸಿದೆ ಮತ್ತು ಸದರಿ ರಜೆಗೆ ವೇತನ ಪಾವತಿಸಲು ಸೂಚಿಸಿದೆ. ತಪ್ಪಿದಲ್ಲಿ ಪ್ರಜಾ ಪ್ರಾತಿನಿಧ್ಯ ಕಾಯ್ದೆ 1951 ರ ಉಲ್ಲಂಘನೆಯಾಗುತ್ತದೆ ಎಂದು ಈ ಮೂಲಕ ತಿಳಿಸಿದೆ.

ಕಾರ್ಖಾನೆಯು ನಿರಂತರ ಉತ್ಪಾದನಾ ಕಾರ್ಯವಿಧಾನ ಹೊಂದಿದ್ದು, ಕಾರ್ಮಿಕರ ಅನುಪಸ್ಥಿತಿಯಿಂದ ಕಾರ್ಖಾನೆಗೆ ಅಪಾಯ ಅಥವಾ ಗಣನೀಯ ನಷ್ಟ ಉಂಟಾಗುವ ಸಾಧ್ಯತೆಯಿದ್ದಲ್ಲಿ ಪರ್ಯಾಯ ವ್ಯವಸ್ಥೆಯನ್ನು ರೂಪಿಸಿ ಅಂತಹ ಕೆಲಸದಲ್ಲಿ ತೊಡಗಿರುವ ಅರ್ಹ ಮತದಾರ ಕಾರ್ಮಿಕರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ಸಾಕಷ್ಟು ಕಾಲಾವಕಾಶ ಮಾಡಿಕೊಡಲು ಸೂಚಿಸಿದೆ. ಭಾರತ ಚುನಾವಣಾ ಆಯೋಗದ ನಿರ್ದೇಶನದ ಪತ್ರವನ್ನು ಈ ಪತ್ರದೊಂದಿಗೆ ಲಗತ್ತಿಸಿ ಅದರಂತೆ ಕ್ರಮ ವಹಿಸಲು ಸೂಚಿಸಿದೆ.

ಅಡಕ : ಮೇಲಿನಂತೆ

ನಿರ್ದೇಶಕರು,
ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ
ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಬೆಂಗಳೂರು

ಇವರಿಗೆ,